



# ಶ್ರೀಮಾತೆಯವರ ಬೋಧನೆಗಳ ಸಾರ

ಸಾಮಾನ್ಯವಾಗಿ ಮಹಾಪುರುಷರ, ಸಾಧುಸಂತರ ಜೀವನ-ಸಂದೇಶಗಳು ಒಂದು ಕಾಲಕ್ಕೆ ಸೀಮಿತವಾಗಿರದೆ, ಆಯಾ ಕಾಲ-ದೇಶಗಳ ಚೌಕಟ್ಟನ್ನು ಮೀರಿ ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಸನ್ನಿವೇಶಗಳಿಗೂ ಪ್ರಸ್ತುತವೆನಿಸುತ್ತವೆ. ಅವರು ಕಂಡಿರುವ ಸತ್ಯ, ಅವರ ದೃಷ್ಟಿಕೋನ, ದರ್ಶನ-ಅನುಭವಗಳು ಸಾರ್ವತ್ರಿಕವಾಗಿರುವುದೇ ಇದಕ್ಕೆ ಕಾರಣ. ಆದರೆ, ಸಾಮಾಜಿಕ ಬದಲಾವಣೆಗಳಿಗೆ ತಕ್ಕಂತೆ ಮೌಲ್ಯ, ದೃಷ್ಟಿಕೋನಗಳು ಬದಲಾಗುತ್ತವೆ; ಹಿಂದಿನ ಅನೇಕ ಸಾಮಾಜಿಕ ವಿಚಾರಗಳು ಹೊಸ ಸಂದರ್ಭಗಳಲ್ಲಿ ನಿರುಪಯುಕ್ತವೆನಿಸುತ್ತವೆ. ಮಹಾತ್ಮರುಗಳು ಆಯಾ ಕಾಲ-ದೇಶಗಳಿಗೆ ಬದ್ಧರಾಗಿದ್ದುಕೊಂಡೇ ಜೀವನ ನಡೆಸಿದ್ದರೂ, ಅವರು ಕಂಡ ಸತ್ಯಗಳು ಮಾತ್ರ ಆ ಮಿತಿಯನ್ನು ದಾಟಿ ಜನರನ್ನು ಪ್ರೇರೇಪಿಸಬಲ್ಲವು. ಇದಕ್ಕೆ ಅತ್ಯುತ್ತಮ ಉದಾಹರಣೆ ಶ್ರೀಮಾತೆ ಶಾರದಾದೇವಿಯವರು.

ಪ್ರಪಂಚದ ಹಲವು ಧರ್ಮಗಳಲ್ಲಿ, ಹಲವು ದೇಶಗಳಲ್ಲಿ ಅನೇಕ ಮಂದಿ ಮಹಿಳೆಯರು ಆಧ್ಯಾತ್ಮಿಕ ಶಿಖರವನ್ನು ತಲುಪಿದ ಉದಾಹರಣೆಗಳಿವೆ. ನಮ್ಮಲ್ಲೇ ಗೋದಾದೇವಿ, ಮೀರಾಬಾಯಿ, ಅಕ್ಕಮಹಾದೇವಿಯರು ಆಗಿಹೋಗಿದ್ದಾರೆ. ಪ್ರಾಚೀನ ಕಾಲದಲ್ಲೂ ಗಾರ್ಗಿ, ಮೈತ್ರೇಯಿ, ಸಾವಿತ್ರಿ, ಸೀತೆಯಂತಹ ಅದ್ಭುತ ಮಹಿಳೆಯರಿದ್ದರು. ಸಾಮಾನ್ಯ ಮಹಿಳೆಯರ ಜೀವನಶೈಲಿಯನ್ನು ದಾಟಿ, ತಮ್ಮ ಅದ್ಭುತ ವ್ಯಕ್ತಿತ್ವದಿಂದ ಬೆಳಗಿದ ಇವರುಗಳು ಭಾರತೀಯ ನಾರಿಯ ಆದರ್ಶ ಎಂತಹದು ಎಂಬುದನ್ನು ರೂಪಿಸಿದ್ದಾರೆ. ಆದರೆ ಪ್ರಾಚೀನ ಹಾಗೂ ನೂತನ ಈ ಎರಡೂ ವಿಚಾರ-ಆದರ್ಶಗಳನ್ನು ಸಮನ್ವಯಗೊಳಿಸಿಕೊಂಡು, ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ತಮ್ಮ ಸಮತೂಕವನ್ನು ಮೀರದೆ, ಎಲ್ಲ ಸಂಕುಚಿತ ಭಾವಗಳ ಗಡಿಯನ್ನು ದಾಟಿ ಅದ್ವಿತೀಯ ಪ್ರೇಮವನ್ನು ಬೀರಿ, ಜಗತ್ತನ್ನು ತಮ್ಮ ಬದುಕಿನಿಂದ ಬೆಳಗಿಸಿದವರು ಶ್ರೀಮಾತೆ. ಹಿಂದಿನ ಎಲ್ಲ ತಪಸ್ವಿನಿಯರ, ಸಾಧಕಿಯರ, ದೇವ-ದೇವಿಯರ ಜೀವಚೈತನ್ಯವೆಲ್ಲ ಒಗ್ಗೂಡಿ ಬಂದು ಪ್ರಕಟಗೊಂಡ ಮಾತೃರೂಪಿಣಿ ಶಕ್ತಿಯೇ ಶ್ರೀಮಾತೆ ಶಾರದಾದೇವಿಯವರು.

## ಶ್ರೀಮಾತೆಯವರ ಅಸಾಧಾರಣ ಜೀವನ

ಶ್ರೀಮಾತೆಯವರ ಉಪದೇಶಗಳು ಅವರ ಜೀವನಕ್ಕಿಂತ ಪ್ರತ್ಯೇಕವಾಗಿ ನಿಲ್ಲುವುದಿಲ್ಲ. ಅವರ ಬಹುತೇಕ ಉಪದೇಶಗಳೂ ಹಾಗೆಯೇ – ಜೀವನದ ಯಾವುದೋ ಸಾಧಾರಣ ಸನ್ನಿವೇಶಗಳಲ್ಲಿ ಮೂಡಿಬಂದ ಮಾತುಗಳು. ಯಾವುದೋ ಸಂದರ್ಭದಲ್ಲಿ ಇತರರಿಗೆ ಪ್ರಾಸಂಗಿಕವಾಗಿ ಹೇಳಿದ ಮಾತುಗಳು, ಆ ಸನ್ನಿವೇಶದಾಚೆಗೂ ಅಪೂರ್ವ ಅರ್ಥವನ್ನು ಸೂಚಿಸುತ್ತವೆ, ಇತರ ಸಂದರ್ಭಗಳಲ್ಲೂ ಮಹತ್ವದ್ದೆನಿಸುತ್ತವೆ. ಆದರೆ ಆಯಾ ಸನ್ನಿವೇಶಗಳಲ್ಲಿ ಅವರು ಆಡಿದ ಮಾತುಗಳನ್ನು ಆ ಸಂದರ್ಭದೊಂದಿಗೇ ಅರಿತುಕೊಳ್ಳುವುದು ಹೆಚ್ಚು ಮುಖ್ಯವೆನಿಸುತ್ತದೆ. ಕೆಲವೊಮ್ಮೆ ಸಂಸಾರಿಗಳಿಗೂ ಸಂನ್ಯಾಸಿಗಳಿಗೂ ವಿರುದ್ಧವೆನ್ನಬಹುದಾದ ರೀತಿಯಲ್ಲಿ ಉಪದೇಶ ನೀಡಿದ್ದರು ಶ್ರೀಮಾತೆ. ಸಂಸಾರಿಗಳಿಗೆ, 'ನೀವೇಕೆ ಸಂಸಾರವನ್ನು ದೂಷಿಸಬೇಕು? ನಿನ್ನ ಕರ್ತವ್ಯ ಮಾಡುತ್ತ, ಎಲ್ಲರೊಡನೆ ಬೆರೆತು ಆನಂದದಿಂದ ಸಾಧನೆ ಮಾಡುತ್ತಿರು' ಎನ್ನುತ್ತಿದ್ದರು. ಆದರೆ ಸಂನ್ಯಾಸಿಗಳಿಗೆ, 'ತ್ಯಾಗಜೀವನವೇ ಅತ್ಯುತ್ತಮ. ಸಂಸಾರದಲ್ಲಿ ಏನಿದೆ? ಬೇರೆಲ್ಲವನ್ನೂ ಬದಿಗಿಟ್ಟು ಭಗವಂತನನ್ನೇ ಆಶ್ರಯಿಸು' ಎನ್ನುತ್ತಿದ್ದರು. *(ನೋಡಿ, ಶಾರದಾದೇವಿ ಜೀವನಗಂಗಾ, ಪು.೪೭೫)* ಇಂತಹ ಉದಾಹರಣೆಗಳಲ್ಲಿ ನಾವು ಸಂದರ್ಭ-ಸನ್ನಿವೇಶಗಳನ್ನು ಗಮನಿಸದಿದ್ದರೆ ತಪ್ಪು ಅರ್ಥ ಉಂಟಾಗುವ ಸಾಧ್ಯತೆಯಿದೆ. ಉಳಿದ ಅನೇಕ ಉಪದೇಶಗಳು ಸಾರ್ವತ್ರಿಕವಾಗಿರುತ್ತವೆ, ಆದ್ದರಿಂದ ಸನ್ನಿವೇಶಗಳನ್ನು ಅರಿತಿಲ್ಲದಿದ್ದೂ ಅವು ಸರಿಯಾದ ಅರ್ಥವನ್ನೇ ನೀಡಬಲ್ಲವು. ಹೀಗೆ ಯಾವುದು ಸಾಂದರ್ಭಿಕ, ಯಾವುದು ಸಾರ್ವತ್ರಿಕ ಎಂದು ಬೇರ್ಪಡಿಸುವುದು ಹೇಗೆ? ಶ್ರೀಮಾತೆಯರ ಜೀವನವನ್ನು ಕುರಿತು ಓದಿ ತಿಳಿದುಕೊಂಡು, ನಮ್ಮ ವಿವೇಚನೆಯಿಂದ ಅವರ ಉಪದೇಶಗಳನ್ನು ಅರ್ಥಮಾಡಿಕೊಳ್ಳುವುದೇ ಇದಕ್ಕೆ ಸರಿಯಾದ ಮಾರ್ಗ.

## ಶ್ರೀಮಾತೆಯವರ ಉಪದೇಶಗಳ ಹಿರಿಮೆ

ಗ್ರಾಮೀಣ ಜನಜೀವನದ ನಡುವೆ ಬಾಳಿ ಬದುಕಿದ ಶ್ರೀಮಾತೆಯವರು ತಮ್ಮ ಬಳಿಗೆ ಬಂದವರಿಗೆಲ್ಲ ಆಧ್ಯಾತ್ಮಿಕ ಉಪದೇಶಗಳನ್ನು ನೀಡಿದ್ದರು ಎನ್ನಲಾಗದು; ಆದರೆ ದೀಕ್ಷೆ ಪಡೆದ ಶಿಷ್ಯಂದಿರು, ಸಂನ್ಯಾಸಿ ಶಿಷ್ಯರು, ಶ್ರೀರಾಮಕೃಷ್ಣರ ನೇರ ಶಿಷ್ಯಂದಿರು, ಇತರ ಆಧ್ಯಾತ್ಮಿಕ ಸಾಧಕರಿಗೆ ಅವರು ನೀಡಿದ ಸಲಹೆ, ಮಾರ್ಗದರ್ಶನಗಳು ಅತ್ಯಂತ ಅಮೂಲ್ಯವಾಗಿವೆ. ಆದರೆ ಕೆಲವೊಮ್ಮೆ ಅವರ ಸಾಮಾನ್ಯವಾದ ಮಾತುಗಳೂ ಉಪದೇಶಗಳಂತೆಯೇ ಮಹತ್ವಪೂರ್ಣವಾಗಿವೆ. ಶ್ರೀಮಾತೆಯರು ಸದಾ ಲೌಕಿಕ ಜನಜೀವನದಲ್ಲೇ ಮುಳುಗಿದ್ದರೂ, ಸಕ್ರಿಯವಾಗಿ ತೊಡಗಿಕೊಂಡಿದ್ದರೂ, ಅವರ ಅಂತರಂಗವೆಲ್ಲ ಭಗವನ್ಮಯವಾಗಿದ್ದುದೇ ಇದಕ್ಕೆ

ಕಾರಣ. ಕಸ ಗುಡಿಸುತ್ತಿದ್ದ ವ್ಯಕ್ತಿಯೊಬ್ಬ ತನ್ನ ಕೆಲಸವಾದ ಬಳಿಕ ಕಸಬರಿಕೆಯನ್ನೆಸೆದು ಹೋದ. ''ಇದೆಂಥ ವಿಚಿತ್ರ! ಕೆಲಸವಾಯಿತು ಎಂದು ಆ ವಸ್ತುವನ್ನು ಅಸಡ್ಡೆಯಿಂದ ಬಿಸಾಡಿಬಿಟ್ಟೆ. ಅದನ್ನು ನಿಧಾನವಾಗಿ ಅಲ್ಲೇ ಇಡುವುದಕ್ಕೂ ಬಿಸಾಡುವಷ್ಟೇ ಸಮಯ ಸಾಕಾಗುತ್ತಿತು. ಅದೊಂದು ಕ್ಷುಲ್ಲಕ ವಸ್ತುವೆಂದು ಅದನ್ನು ಹಾಗೆ ತಿರಸ್ಕಾರದಿಂದ ನೋಡಬೇಕೇ? ನಾಳೆ ಮತ್ತೆ ನಿನಗದು ಬೇಡವೆ? ಪ್ರತಿಯೊಂದು ವಸ್ತುವಿಗೂ ಅದರದ್ದೇ ಆದ ಮರ್ಯಾದೆಯಿದೆ'' ಎಂದು ಬುದ್ಧಿ ಹೇಳಿದರು ಶ್ರೀಮಾತೆ. ಜಡವಸ್ತುವಿಗೂ ವ್ಯಕ್ತಿತ್ವ ವಿದೆ, ಅನಂತ ಜಗತ್ತಿನಲ್ಲಿ ಒಂದು ಸಣ್ಣ ಕಣಕ್ಕೂ ಅಸ್ತಿತ್ವವಿದೆ ಎಂದು ಒಬ್ಬ ವೇದಾಂತಿ ಹೇಳಬಲ್ಲ, ಒಬ್ಬ ವಿಜ್ಞಾನಿ ಹೇಳಬಲ್ಲ. ಆದರೆ ಶ್ರೀಮಾತೆ ಹಾಗೆ ಹೇಳಬೇಕಾದರೆ, ಅದಕ್ಕೆ ಅವರ ಸರ್ವ ಸಮದೃಷ್ಟಿಕೋನವೇ ಕಾರಣ. ಆಧ್ಯಾತ್ಮಿಕ ಅನುಭವದ ಆಳ ದಿಂದ ಮೂಡಿಬಂದ ದೃಷ್ಟಿಕೋನವಿದು. ಅವರ ದೈನಂದಿನ ಜೀವನದ ಸಣ್ಣ ಘಟನೆಗಳಲ್ಲೂ ಅದು ವ್ಯಕ್ತವಾಗುತ್ತಿತ್ತು. ಈ ರೀತಿ ಅವರ ಮಾತುಗಳಿಗೆ ಸಾಂದರ್ಭಿಕವಾದ ಸೀಮಿತತೆಯನ್ನು ದಾಟಿದ ಸಮಗ್ರತೆಯಿದೆ.

## 'ಎಲ್ಲರೂ ತನ್ನ ಮಕ್ಕಳೇ'

ಭಗವದ್ಗೀತೆಯಲ್ಲಿ, 'ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ', ಹಾಗೂ 'ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ । ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ' (ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು – ಎಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುತ್ತಾರೆ) – ಎಂದು 'ಸಮ ದರ್ಶನ' ವನ್ನು ಹೊಂದಿದ ಸಂತರ ಲಕ್ಷಣವನ್ನು ಹೇಳಲಾಗಿದೆ. ಆದರೆ ಈ ಬಗೆಯ ದೃಷ್ಟಿಕೋನವನ್ನು ನಿಜವಾಗಿ ಆಚರಿಸಿದವ ರಿದ್ದಾರೆಯೆ? – ಈ ಸಂದೇಹ ನಮಗೆ ಮೂಡುವುದು. ಸಂತರ, ಮಹಾತ್ಮರ ಜೀವನವನ್ನು ಅರಿತುಕೊಂಡಲ್ಲದೆ ನಮಗೆ ಈ ಶ್ಲೋಕಗಳ ಅರ್ಥ ಮನದಟ್ಟಾಗದು. ಶ್ರೀಮಾತೆಯವರ ಜೀವನ ಈ ಬಗೆಯ ಸಮದರ್ಶನವನ್ನು ತೋರಿಸಿ ಕೊಡಲು ಅತ್ಯುತ್ತಮ ಉದಾಹರಣೆಯಾಗಿದೆ. ಅತಿ ಶ್ರೇಷ್ಠ ಸಂನ್ಯಾಸಿಗಳನ್ನೂ ಶ್ರೀಮಾತೆ ಯವರು ಭೇಟಿ ಮಾಡಿ ಗೌರವ ಸಲ್ಲಿಸಿದ್ದರು; ಶ್ರೀರಾಮಕೃಷ್ಣರ ನೇರ ಶಿಷ್ಯಂದಿರಾದ ಸ್ವಾಮಿ ವಿವೇಕಾನಂದರೇ ಮೊದಲಾದವ ರನ್ನೂ ವಿಶೇಷ ಪ್ರೀತಿಯಿಂದ ಕಂಡಿದ್ದರು. ಅದೇ ರೀತಿ ಅಂತ್ಯ ಜರು, ಅನ್ಯ ಜಾತೀಯರು, ಬೇರೆ ಧರ್ಮಕ್ಕೆ ಸೇರಿದವರು ಕೂಡ ಅವರ ಪ್ರೀತಿಗೆ ಪಾತ್ರರಾಗಿದ್ದರು. ಅಷ್ಟೇಕೆ, ಪ್ರಾಣಿ, ಪಕ್ಷಿ, ಕೀಟಾದಿಗಳನ್ನೂ ಅವರು ತಮ್ಮ ಮಕ್ಕಳೆಂದೇ ಭಾವಿಸುತ್ತಿದ್ದರು. ಶ್ರೀಮಾತೆಯವರು ತಮ್ಮ ಸೇವಕರಾಗಿದ್ದ ಬ್ರಹ್ಮಚಾರಿ ರಾಸಬಿಹಾರಿ ಯೊಂದಿಗೆ ಮಾತುಕತೆಯಾಡುತ್ತಿದ್ದಾಗ ಅವನು ಕೇಳಿದ : 'ನೀವು ಎಲ್ಲರ ತಾಯಿಯೆ?' ಅದಕ್ಕೆ ಶ್ರೀಮಾತೆ, 'ಹೌದು' ಎಂದರು. 'ಈ ಎಲ್ಲ ಜೀವಜಂತುಗಳಿಗೂ ತಾಯೆಯೆ?' ಎಂದು ಕೇಳಿದಾಗ, ''ಹೌದು, ಅವುಗಳಿಗೂ'' ಎಂದರು ಶ್ರೀಮಾತೆ. *(ಶ್ರೀಶಾರದಾದೇವಿ ವಚನವೇದ, ಪು.೧೨೭)* ಅಷ್ಟೊಂದು ವಿಶಾಲ ಹೃದಯವನ್ನು ಹೊಂದಿದ್ದ ಶ್ರೀಮಾತೆಯವರು ಎಲ್ಲರನ್ನೂ ತಮ್ಮವರನ್ನಾಗಿ ಮಾಡಿ ಕೊಂಡರು. ಅವರಲ್ಲಿ ಯಾವುದೇ ಭೇದಭಾವನೆ ಇರಲಿಲ್ಲ. ಇದಕ್ಕೆ ಅನುಸಾರವಾಗಿ ಅವರು ನೀಡಿದ ಉಪದೇಶ ಹೀಗಿದೆ: ''ನಿನಗೊಂದು ಮಾತು ಹೇಳುತ್ತೇನೆ, ಕೇಳು. ನಿನಗೇನಾದರೂ ಶಾಂತಿ ಬೇಕಿದ್ದರೆ ಯಾರಲ್ಲೂ ದೋಷ ಕಾಣಬೇಡ. ಒಂದು ವೇಳೆ ದೋಷವನ್ನು ಕಾಣುವುದಾದರೆ ನಿನ್ನ ದೋಷವನ್ನೇ ನೋಡಿಕೊ. ಈ ಇಡೀ ಜಗತ್ತನ್ನೇ ನಿನ್ನದನ್ನಾಗಿ ಮಾಡಲು ಕಲಿತುಕೋ. ನೋಡು, ಇಲ್ಲಿ ಪರಕೀಯರೆಂಬವರು ಯಾರೂ ಇಲ್ಲ. ಈ ಇಡೀ ಜಗತ್ತೇ ನಿನ್ನದು.'' *(ಶಾರದಾದೇವಿ ಜೀವನಗಂಗಾ, ಪು.೭೪೭)*

ಪ್ರಪಂಚದ ಎಲ್ಲ ಸಮಸ್ಯೆಗಳ ಮೂಲವೂ ಇದೇ; ಇದಕ್ಕೆ ಪರಿಹಾರವೂ ಇಲ್ಲೇ ಇದೆ. ಇತರರನ್ನು ದ್ವೇಷಿಸಿದರೆ, ನನ್ನವ ರೆಂದು ಭಾವಿಸದಿದ್ದರೆ ಅನವಶ್ಯಕ ಜಗಳ, ಪೈಪೋಟಿ, ದ್ವೇಷ ಬೆಳೆಯುವುದು. ವ್ಯಕ್ತಿಗಳ, ಜನಾಂಗಗಳ, ದೇಶಗಳ ನಡುವಿನ ಬಿಕ್ಕಟ್ಟಿಗೆ ಇದೇ ಕಾರಣ. ಈ ಭಾವನೆಯನ್ನು ಬಿಟ್ಟು, ಎಲ್ಲರೂ ನನ್ನವರೇ ಎಂದು ಭಾವಿಸಿದರೆ, ಈ ಎಲ್ಲ ಸಮಸ್ಯೆಗಳೂ ಪರಿ ಹಾರವಾಗುವುದಿಲ್ಲವೆ? ಬಸವಣ್ಣನವರ 'ಇವನಾರವ ಇವ ನಾರವ ಎಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ' ಎಂಬ ಮಾತಿನ ತಿರುಳೂ ಇದೇ ಆಗಿದೆ. ಆದರೆ ಈ ಮಾತುಗಳ ಅಂತರಾರ್ಥವನ್ನು ಅರಿತು, ಜೀವನದಲ್ಲಿ ಅದನ್ನು ಆಚರಿಸುವವರು ಕೆಲವೇ ಮಂದಿ ಎಂಬುದೇ ಈ ಜಗತ್ತಿನ ದುರಂತ.

## 'ಕೆಲಸ ಮಾಡು' –ಪ್ರಾಯೋಗಿಕ ಉಪದೇಶ

ತನಗಾಗಿ, ತನ್ನ ಸುಖಕ್ಕಾಗಿ ಎಂಬ ಸ್ವಾರ್ಥಬುದ್ಧಿ ಸ್ವಲ್ಪವೂ ಇಲ್ಲದೆ, ಎಲ್ಲವನ್ನೂ ಇತರರಿಗಾಗಿ ಮಾಡಿದವರು ಶ್ರೀಮಾತೆ. ಶ್ರೀರಾಮಕೃಷ್ಣರು ತೀರಿಕೊಂಡ ಸಂದರ್ಭದಲ್ಲಿ ದುಃಖ ತಡೆಯ ಲಾಗದೆ, ದೇಹವನ್ನೇ ಬಿಟ್ಟುಬಿಡುತ್ತೇನೆ ಎಂದುಕೊಂಡಿದ್ದರಂತೆ ಶ್ರೀಮಾತೆ. ಆಗ ಶ್ರೀರಾಮಕೃಷ್ಣರೇ ಅವರಿಗೆ ಆದೇಶ ನೀಡಿದರು – 'ಇಲ್ಲ, ನೀನು ಬದುಕಬೇಕು. ಕ್ಷುಲ್ಲಕ ಜೀವನ ನಡೆಸುತ್ತಿರುವ ಜನರಿಗೆ ನೀನು ದಾರಿ ತೋರಿಸಬೇಕು' ಎಂದು. ಅದನ್ನು ಪಾಲಿಸಿ ದರು ಶ್ರೀಮಾತೆ. ಮುಂದಿನ ಸುದೀರ್ಘ ಜೀವನದುದ್ದಕ್ಕೂ ಶ್ರೀರಾಮಕೃಷ್ಣರು ಕಲಿಸಿಕೊಟ್ಟ ಆಧ್ಯಾತ್ಮಿಕ ಪ್ರೀತಿಯನ್ನೇ ಉಸಿರಾ ಡುತ್ತ, ಸಮಸ್ತ ಜಗತ್ತಿನ ಮಂಗಳವನ್ನೇ ಬಯಸುತ್ತ, ಪ್ರತಿ ಯೊಂದು ಜೀವಿಗೂ ಅದರದರ ಮಾರ್ಗದಲ್ಲಿ ನೆರವಾಗುತ್ತ ಶ್ರೀಮಾತೆ ಬದುಕಿದರು. ಕೆಲಸವಿಲ್ಲದೆ ಒಂದು ಕ್ಷಣವೂ ಕುಳಿತವ ರಲ್ಲ ಅವರು. ಸಾಂಸಾರಿಕ ತಾಪತ್ರಯದ ನಡುವೆ, ತಮ್ಮ ಬಳಿಗೆ ಬರುತ್ತಿದ್ದ ಅನೇಕ ಭಕ್ತರ ನಡುವೆ, ದಿನನಿತ್ಯದ ಕೆಲಸಗಳಾದ ಅಡುಗೆ, ಸ್ವಚ್ಛಗೊಳಿಸುವುದು ಇತ್ಯಾದಿಗಳ ನಡುವೆ ಅವರು ಲಕ್ಷ ಲಕ್ಷ ಜಪ, ಧ್ಯಾನ ಮಾಡುತ್ತಿದ್ದರು. ಪ್ರತಿಯೊಬ್ಬರ ಒಳತಿಗಾಗಿ ಅವರು ಪ್ರಾರ್ಥಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರ ಈ ಉಪ

ದೇಶವನ್ನು ಗಮನಿಸಬೇಕು: ''ಕೆಲಸ ಮಾಡದಿದ್ದರೆ ಮನಸ್ಸು ಚೆನ್ನಾಗಿರುತ್ತದೆಯೆ? ಆದ್ದರಿಂದ ಕಲಸ ಮಾಡಬೇಕು. ಅದರಿಂದ ಮನಸ್ಸು ಸುಸ್ಥಿತಿಯಲ್ಲಿರುತ್ತದೆ.'' *(ಶ್ರೀಶಾರದಾದೇವಿ ವಚನವೇದ, ಪು.೧೭೨)*

ತ್ಯಾಗ, ವೈರಾಗ್ಯ ಬೋಧನೆಯಿಂದ ಅನೇಕ ಬಾರಿ ವ್ಯಾವಹಾರಿಕ, ಲೌಕಿಕ ಜೀವನವನ್ನು ಬಿಟ್ಟುಬಿಡಬೇಕೆಂಬ ಭಾವನೆ ಮೂಡಿ ಬರುವುದುಂಟು. ಆದರೆ ಸಹಜವಾಗಿಯೇ ಕರ್ಮವು ಬಿದ್ದುಹೋಗಬೇಕು, ಅಲ್ಲಿಯತನಕವೂ ನಿಷ್ಕಾಮಭಾವದಿಂದ ಕರ್ಮ ಮಾಡಬೇಕು ಎಂಬುದೇ ಜ್ಞಾನಿಗಳ ಬೋಧನೆ. ಆದ್ದರಿಂದ ಮೋಕ್ಷಕ್ಕಾಗಿ ಕರ್ಮವನ್ನೇ ಬಿಟ್ಟುಬಿಡಬೇಕೆಂಬ ತತ್ತ್ವಭಾವನೆ ಹಲವರಲ್ಲಿದೆ. ತಾನಾಗಿ ಕರ್ಮದ ಬಂಧನ ಕಳಚಿಹೋಗುವವರೆಗೂ ಕರ್ಮಮಾಡುತ್ತಿರಬೇಕು, ಆ ಕರ್ಮವನ್ನೇ ಭಗವದರ್ಪಣೆ ಮಾಡಿದರೆ ಅದರಿಂದ ಬಂಧನವುಂಟಾಗದು ಎಂಬ ಗೀತೆಯ ಉಪದೇಶವನ್ನೇ ಶ್ರೀಮಾತೆಯವರು ಪ್ರತಿಧ್ವನಿಸುತ್ತಾರೆ. ಶಾಸ್ತ್ರಾಧ್ಯಯನ ಮಾಡಿದವರಲ್ಲ ಶ್ರೀಮಾತೆ; ಆದರೆ ಎಲ್ಲ ಶಾಸ್ತ್ರಗಳ ತಿರುಳನ್ನೇ ಅವರು ಬದುಕಿ ತೋರಿಸಿದರು.

### ಸಹನೆಯ ಮಹತ್ವ

ಶ್ರೀಮಾತೆಯವರು ಜೀವಿಸಿದ್ದ ಗ್ರಾಮೀಣ ಪರಿಸರದಲ್ಲಿ ಹತ್ತು ಹಲವು ಮಂದಿ ಆರ್ತರು, ದುಃಖಿತರು, ಸಾಂಸಾರಿಕ ಜಂಜಾಟಗಳಲ್ಲಿ ನೊಂದು ಬೆಂದವರು ಇರುತ್ತಿದ್ದರು. ಶ್ರೀಮಾತೆಯವರ ಮನೆಯಲ್ಲೇ ಹತ್ತಾರು ಸಮಸ್ಯೆ, ಜಗಳ, ದುಃಖಸಂಕಟಗಳಿದ್ದವು. ಅವೆಲ್ಲವನ್ನೂ ಸರಿದೂಗಿಸಿಕೊಂಡು, ಅನೇಕ ಮಂದಿ ಅತಿಥಿ ಅಭ್ಯಾಗತರನ್ನೂ ನೋಡಿಕೊಳ್ಳುತ್ತ, ಜೊತೆಗೆ ತಮ್ಮ ಸಾಧನೆಯನ್ನೂ, ಮಾಡುತ್ತ ಹೋಗಬೇಕಾದರೆ ಶ್ರೀಮಾತೆಯವರ ಸಹನೆ ಅದೆಂತಹದಿರಬೇಕು! ''ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಸ, ಶ, ಷ – ಅಂತ ಮೂರು ಬಗೆಯ ಸಕಾರಗಳಿವೆ' ಅಂತ. (ಬಂಗಾಳಿಯಲ್ಲಿ ಮೂರು ಅಕ್ಷರಗಳ ಉಚ್ಚಾರವೂ ಒಂದೇ. 'ಸ' ಎಂದರೆ ಸಹಿಸು ಎಂದರ್ಥ) ಯಾರು ಸಹಿಸುವನೋ ಅವನು ಮಾತ್ರ ಉಳಿದಾನು.''*(ಅಲ್ಲೇ, ಪು.೧೭೨)* ನಳಿನಿಯಂಥ ಹಟಮಾರಿ, ಶ್ರೀಮಾತೆಯವರ ತಮ್ಮಂದಿರ ಸ್ವಾರ್ಥಬುದ್ಧಿ, ಹಲವು ರೀತಿಯಲ್ಲಿ ತೊಂದರೆ ನೀಡುವ ಹಳ್ಳಿಯ ಜನರು – ಇವರೆಲ್ಲರ ನಡುವೆ ಆಧ್ಯಾತ್ಮಿಕ ಸಾಧನೆ ಮಾಡಲು ಶ್ರೀಮಾತೆಯವರು ಪ್ರತಿಕ್ಷಣವೂ ಸಹನೆ, ತಾಳ್ಮೆ ಹೊಂದಿರಬೇಕಾಗಿದ್ದಿತು. ಆದರೆ ಅದನ್ನು ಅವರು ಪ್ರಯತ್ನಪೂರ್ವಕ ರೂಢಿಸಿಕೊಳ್ಳಬೇಕಾಗಿರಲಿಲ್ಲ, ಅದು ಅವರ ಸಹಜ ಗುಣವಾಗಿತ್ತು. ಈ ರೀತಿ ನಮ್ಮ ಸ್ವಭಾವವೇ ಶಾಂತವೂ, ಸಹನೆ-ತಾಳ್ಮೆಗಳಿಂದ ಕೂಡಿದ್ದೂ ಆಗಿದ್ದರೆ ಅದು ಸಾಧನೆಗೆ ಅತ್ಯಂತ ಉತ್ತಮವೆಂದು ಶ್ರೀಮಾತೆಯವರು ಹೇಳುತ್ತಿದ್ದರು.

### ಶ್ರದ್ಧೆ, ಭಕ್ತಿಯ ಶುದ್ಧ ಮಾರ್ಗ

ಎಲ್ಲರಿಗೂ ಸಹಜವಾಗಿ ಆಚರಿಸಬಹುದಾದ ಶುದ್ಧ ಭಕ್ತಿಯ ಮಾರ್ಗವನ್ನು ಶ್ರೀಮಾತೆಯವರು ಉಪದೇಶಿಸುತ್ತಿದ್ದರು. ಸರಳ, ಅಕೃತ್ರಿಮ ನಡವಳಿಕೆ ಅವರ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ಅವರು ನೈವೇದ್ಯ ಮಾಡುವ ವಿಧಾನವನ್ನು ಕುರಿತು ಹೇಳುವಾಗ ಹೇಳುತ್ತಾರೆ, ವಿಧಿಪೂರ್ವಕ ಮಂತ್ರವನ್ನು ಹೇಳಿ ನೈವೇದ್ಯ ಮಾಡಿದ ಬಳಿಕ ಭಗವಂತ ನಮ್ಮ ಕರೆಯನ್ನು ಮನ್ನಿಸಿ ಬರುತ್ತಾನೆ, ನಾವು ಪ್ರೀತಿಯಿಂದ ನೀಡಿದ ಆಹಾರವನ್ನು ಸ್ವೀಕರಿಸುತ್ತಾನೆ ಎಂಬುದನ್ನು ಭಾವಿಸಿಕೊಳ್ಳಬೇಕು. ಶ್ರೀಮಾತೆಯವರು ಹೇಳುತ್ತಾರೆ, ''ಆತ್ಮೀಯವಾಗಿ ಕರೆದು ಹೇಳಬೇಕು, 'ಬನ್ನಿ, ಆಹಾರ ಸ್ವೀಕರಿಸಿ, ಊಟಕ್ಕೆ ಸಮಯವಾಯಿತು' ಅಂತ. ಭಗವಂತ ನಮ್ಮವನೇ ಅಲ್ಲವೆ?'' ಸ್ವತಃ ಶ್ರೀಮಾತೆಯವರೇ ಪೂಜೆ ಮಾಡುವಾಗ ಶ್ರೀರಾಮಕೃಷ್ಣರನ್ನು, ಗೋಪಾಲನನ್ನು ಹಾಗೆ ಕರೆಯುತ್ತಿದ್ದರು. ಇದು ಭಾವಪೂರ್ಣ ಪೂಜೆಯ ವಿಧಾನ. ಇಲ್ಲಿ ಮಂತ್ರ-ತಂತ್ರಗಳ ಭರಾಟೆಯಿಲ್ಲ; ವಿಧಿವಿಧಾನಗಳ ಅಡಚಣೆಯಿಲ್ಲ. ಭಕ್ತಿ ನಿರರ್ಗಳವಾಗಿ ಉಕ್ಕಿ ಹರಿಯುತ್ತದೆ. ಒಂದೆಡೆ ಅವರು ಹೇಳುತ್ತಾರೆ, ''ವೃಂದಾವನದ ಗೊಲ್ಲ ಹುಡುಗರು ಶ್ರೀಕೃಷ್ಣನನ್ನು ಜಪ-ಧ್ಯಾನಗಳಿಂದ ಪಡೆದರೆ? ಇಲ್ಲ, ಅವರು, 'ಬಾರೋ, ತಿನ್ನೋ; ಇದನ್ನು ತೊಗೊಳ್ಳೋ' – ಎನ್ನುತ್ತ, ಅಂಥ ಪ್ರೀತಿಯಿಂದ ತಮ್ಮ ಶ್ರೀಕೃಷ್ಣನನ್ನು ಪಡೆದರು.'' *(ಅಲ್ಲೇ, ಪು.೧೪೯)*

### ಸ್ತ್ರೀಶಕ್ತಿಯ ಮರುಪ್ರತಿಷ್ಠಾಪನೆ

ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರೇ ಸರ್ವಸ್ವವಾಗಿದ್ದರು. ಎಲ್ಲ ದೇವದೇವಿಯರನ್ನೂ ಅವರಲ್ಲೇ ಕಂಡರು. ಆಧುನಿಕ ಜಗತ್ತಿಗೆ ಆಧ್ಯಾತ್ಮಿಕ ಆದರ್ಶವಾಗಿ ಶ್ರೀರಾಮಕೃಷ್ಣರ ಎರಕದಲ್ಲೇ ಸಾಧಕರು ಜೀವನವನ್ನು ರೂಪಿಸಿಕೊಳ್ಳಬೇಕೆಂದು ಶ್ರೀಮಾತೆಯವರು ಸ್ಪಷ್ಟವಾಗಿ ಹೇಳುತ್ತಾರೆ. ಸರ್ವಧರ್ಮ ಸಮಭಾವ, ಎಲ್ಲ ಯೋಗಗಳ ಸಮನ್ವಯ, ಶುದ್ಧ ತ್ಯಾಗಜೀವನ, ಎಲ್ಲಕ್ಕಿಂತ ಹೆಚ್ಚಾಗಿ ಭಗವಂತನಲ್ಲಿ ಶರಣಾಗತಿ — ಇವನ್ನು ಶ್ರೀರಾಮಕೃಷ್ಣರ ಆದರ್ಶಗಳಿಗೆ ಅನುಗುಣವಾಗಿ ಬೋಧಿಸಿದರು ಶ್ರೀಮಾತೆ. ಸ್ವಾಮಿ ಶಾರದಾನಂದರು ಹೇಳುವಂತೆ, ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿದ್ದರೂ ಶ್ರೀಮಾತೆಯವರು ತಮ್ಮ ಸ್ವಂತಿಕೆ, ತಮ್ಮ ಜೀವನದ ವಿಶಿಷ್ಟತೆಯನ್ನು ವಿಭಿನ್ನವಾಗಿ ವ್ಯಕ್ತಪಡಿಸುತ್ತಾರೆ. ಅವರ ಮಾತೃಭಾವವು ಅಭಿವ್ಯಕ್ತಿಯ ಪರಾಕಾಷ್ಠೆಯನ್ನು ಹೊಂದಿದಾಗ, ಅದು ಶ್ರೀರಾಮಕೃಷ್ಣರ ಆದೇಶ, ಅಭಿಪ್ರಾಯಗಳನ್ನೂ ದಾಟಿ ಹೋಗುವುದು. ಆಧುನಿಕ ಜಗತ್ತಿಗೆ ಭಾರತದ ಕೊಡುಗೆ ಸ್ತ್ರೀಶಕ್ತಿಯ ಮರುಪ್ರತಿಷ್ಠಾಪನೆ ಎಂಬುದನ್ನು ಶ್ರೀಮಾತೆಯವರು ತಮ್ಮ ಉಜ್ವಲ ಆಧ್ಯಾತ್ಮಿಕ ಜೀವನದದಿಂದ ತೋರಿಸಿಕೊಟ್ಟಿದ್ದಾರೆ. ✸

**ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೮ | ಶುಕ್ರವಾರ | ಏಕಾದಶಿ |
| ೨೧ | ಗುರುವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| ೨೩ | ಶನಿವಾರ | ಏಕಾದಶಿ |
| ೨೪ | ಭಾನುವಾರ | ಕ್ರಿಸ್ಮಸ್ ಈವ್ |